ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,
ಸೆಕ್ಟರ್ ನಂ-63, ಪ್ಲಾಟ್ ನಂ:110,ನವನಗರ, ಬಾಗಲಕೋಟೆ-03
Tel:08354-297330

ಸ್ವಾತಂತ್ರ್ಯ ಅಮೃತ ಮಹೋತ್ಸವ

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, HESCOM, Sector No-63,Plot No:110, Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ:ಬಿಜಿಕೆ/ಅಅ(ವಿ)/ಉಲೆನಿ/ಸಲೆ/ಹಿಸ-1/23-24/ ದಿನಾಂಕ:

ದಿನಾಂಕ: 24.05.2023 ರಂದು ಬೆಳಿಗ್ಗೆ 11.30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು: 1) ಶ್ರೀ. ಸಿ ವ್ಹಿ ಶಿವಪೂಜಿ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟೆ.

2) ಶ್ರೀ. ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.

3) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಗ್ರಾಮೀಣ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಪರವಾಗಿ ಶ್ರೀ. ಕಂದಗಲ್ಲ, ಸಹಾಯಕ ಇಂಜನೀಯರ(ವಿ) ರವರು ಹಾಜರಾಗಿರುತ್ತಾರೆ.

4) ಶ್ರೀ. ಅಜೀತನಾಥ ನೇಮಿನಾಥ ವಂದಕುದುರಿ, ಸಾ:ಮಲ್ಲಾಪೂರ ತಾ||ಬಾಗಲಕೋಟೆ ಜಿ||ಬಾಗಲಕೋಟೆ ರವರ ಪ್ರತಿನಿಧಿ ಶ್ರೀ. ರಂಗನಾಥ ಮ. ಪಾಡಮುಖೆ, ಸೆಕ್ಟರ್ ನಂ:3, ನಿವೇಶನ ಸಂಖ್ಯೆ:78, ನವನಗರ ಬಾಗಲಕೋಟೆ.

<u>ಪ್ರಕರಣ ಸಂಖ್ಯೆ:09/2022</u>

ಶ್ರೀ. ಅಜೀತನಾಥ ನೇಮಿನಾಥ ವಂದಕುದುರಿ
ಪ್ರತಿನಿಧಿ: ಶ್ರೀ. ರಂಗನಾಥ ಮ. ಪಾಡಮುಖೆ } -------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಗ್ರಾಮೀಣ ಉಪ-ವಿಭಾಗ
ಹುವಿಸಕಂನಿ., ಬಾಗಲಕೋಟೆ } -------- ಪ್ರತಿವಾದಿ

ವಿಷಯ: "ಸರಿಯಾಗಿ ವಿದ್ಯುತ್ ಸಂಪರ್ಕ ಒದಗಿಸದೇ ಇರುವ" ಕುರಿತು.

*&*&*

ಪ್ರಕರಣ ಸಂಖ್ಯೆ:09/2022 ರಕ್ಕೆ ಸಂಬಂಧಿಸಿದಂತೆ, ದಿನಾಂಕ:24-05-2023 ರಂದು ಬೆಳಿಗ್ಗೆ 11.30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಶ್ರೀ. ಅಜೀತನಾಥ ನೇಮಿನಾಥ ವಂದಕುದುರಿ, ಸಾ:ಮಲ್ಲಾಪೂರ ತಾ||ಬಾಗಲಕೋಟೆ**
**ಜಿ||ಬಾಗಲಕೋಟೆ ರವರ ದಿನಾಂಕ:24-05-2023 ರ ಸಭೆಯಲ್ಲಿನ ಹೇಳಿಕೆ :**

ನನ್ನ ಹೊಲದ ನೀರಾವರಿ ಪಂಪಸೆಟ್‌ಗೆ ನೀಡಿರುವ ವಿದ್ಯುತ್ ಸಂಪರ್ಕ ಸಂಖ್ಯೆ:ಎಮ್.ಐ.ಪಿ-10 ಇದ್ದು ಸದರೀ ವಿದ್ಯುತ್ ಸಂಪರ್ಕದಲ್ಲಿ ವಿದ್ಯುತ್ ವೋಲ್ಟೇಜ್ ಸರಿಯಾಗಿ ಬರುತ್ತಿರುವದಿಲ್ಲ. ಆದ್ದರಿಂದ ವಿದ್ಯುತ್ ಸಂಪರ್ಕವನ್ನು ಪರಿಶೀಲಿಸಿ ನಮಗೆ ಸರಿಯಾದ ವಿದ್ಯುತ್ ಸಂಪರ್ಕ ಒದಗಿಸಿ ಎಂದು ವಿನಂತಿಸಿರುತ್ತಾರೆ.

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನಾ ಗ್ರಾಮೀಣ ಉಪ-ವಿಭಾಗ**
**ಹುವಿಸಕಂನಿ., ಬಾಗಲಕೋಟೆ ರವರ ದಿನಾಂಕ:24-05-2023 ರ ಸಭೆಯಲ್ಲಿನ ಲಿಖಿತ ಹೇಳಿಕೆ :**

100 ಕೆವಿಎ ತಪಶೆಟ್ಟಿ ಐಪಿ ಟಿಸಿ ಇಂದ ವಿದ್ಯುತ್ ಪೂರೈಕೆಯಾಗುತ್ತಿದ್ದು, ಸದರೀ ಪರಿವರ್ತಕದಿಂದ 13 ನೇ ಕಂಬಕ್ಕೆ ಸದರೀಯವರ ಸ್ಥಾವರ ಸಂಪರ್ಕ ಇದ್ದು, ಕಡಿಮೆ ವೋಲ್ಟೇಜ್ ಇರುವುದು ದೃಢಪಡಿಸಿರುತಾರೆ. ವೋಲ್ಟೇಜ್ ಅಭಿವೃದ್ಧಿಪಡಿಸುವ ಸಂಬಂಧವಾಗಿ ಹೆಚ್ಚುವರಿ ಪರಿವರ್ತಕ ಅಳವಡಿಸಲು ಈಗಾಗಲೇ 2020-21, 2021-22 ಮತ್ತು 2022-23 ನೇ ಸಾಲಿನ ಬಜೆಟ್ ಪ್ರಸ್ತಾವನೆಯಲ್ಲಿ ಕಾಮಗಾರಿಯ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಆದರೆ ಬಜೆಟ್ ಪ್ರಸ್ತಾವನೆಯಲ್ಲಿ ಮಂಜೂರಾತಿಯಾಗಿರುವದಿಲ್ಲ. ಈ ವರ್ಷ 2022-23 ನೇ ಸಾಲಿನಲ್ಲಿ ಈ ಕಾಮಗಾರಿಗೆ ಬಜೆಟ್ ನೀಡಿದ ಕೂಡಲೇ ಹೆಚ್ಚುವರಿ ಪರಿವರ್ತಕ ಅಳವಡಿಸಿ, ವೋಲ್ಟೇಜ್ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಅಲ್ಲದೇ ಸದರೀ ಸ್ಥಾವರವು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಸಲ್ಲಿಸಿರುವ ಅರ್ಜಿದಾರರ ಹೆಸರಿನಲ್ಲಿ ಇರುವದಿಲ್ಲ. ಸ್ಥಾವರವು ಅರ್ಜಿದಾರರ ತಂದೆಯವರ ಹೆಸರಿನಲ್ಲಿ ಇರುತ್ತದೆ.

ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

## ಆ ದೇ ಶ

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2023-24/ 2100-2105 ದಿನಾಂಕ: 16 JUN 2023

ಆರ್.ಆರ್ ಸಂಖ್ಯೆ:ಎಮ್.ಐ.ಪಿ-10 ಸ್ಥಾವರವು ಶ್ರೀ. ಎಮ್. ಸಿ. ವಂದಕುದುರಿ ರವರ ಹೆಸರಿನಲ್ಲಿದ್ದು, ವೇದಿಕೆಗೆ ಎ.ಎನ್ ವಂದಕುದುರಿ ಹೆಸರಿನಲ್ಲಿ ಅರ್ಜಿ ಸ್ವೀಕೃತಗೊಂಡಿರುತ್ತದೆ. ಆದ್ದರಿಂದ ಗ್ರಾಹಕರು ಸ್ಥಾವರ ಸಂಖ್ಯೆಯ ಹೆಸರು ಬದಲಾವಣೆ ಮಾಡಿಕೊಂಡು ವೇದಿಕೆಗೆ ಮರು ಅರ್ಜಿ ಸಲ್ಲಿಸಲು ತಿಳಿಸಿ ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟೆ.

ಶ್ರೀ ನಾರಾಯಣ ಕಳ್ಳಿಮನಿ
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟೆ.

ಅಧ್ಯಕ್ಷರು,
(ಸಿದ್ದಪ್ಪ ಬಿಂಜಗೇರಿ,)
ಅಧೀಕ್ಷಕ ಅಭಿಯಂತರರು(ವಿ) ವಿಜಯಪೂರ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟ

ಪ್ರತಿಯನ್ನು:

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಗ್ರಾಮೀಣ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
5) ಶ್ರೀ. ಅಜೀತನಾಥ ನೇಮಿನಾಥ ವಂದಕುದುರಿ, ಸಾ:ಮಲ್ಲಾಪೂರ ತಾ॥ಬಾಗಲಕೋಟೆ ಜಿ॥ಬಾಗಲಕೋಟೆ ರವರ ಪ್ರತಿನಿಧಿ ಶ್ರೀ. ರಂಗನಾಥ ಮ. ಪಾಡಮುಖೆ, ಸೆಕ್ಟರ್ ನಂ:3, ನಿವೇಶನ ಸಂಖ್ಯೆ:78, ನವನಗರ ಬಾಗಲಕೋಟೆ ಮೋಬೈಲ್ ಸಂಖ್ಯೆ:9448646741.

ಕಛೇರಿ ಪ್ರತಿ/ಪ್ರಧಾನ ಕಡತ.